**ಪಾಠ–1** **ಸೆಪ್ಟೆಂಬರ್ 26–ಅಕ್ಟೋಬರ್ 2**

# ಏದೆನ್ ತೋಟದಲ್ಲಿ ಶಿಕ್ಷಣ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಆದಿಕಾಂಡ 2:7–23; ಆದಿಕಾಂಡ 3:1–6; 2 ಪೇತ್ರ 1:3–11; 2 ಪೇತ್ರ 2:1–17; ಇಬ್ರಿಯ 13:7,17,24.

**ಸ್ಮರಣವಾಕ್ಯ : "ಇಗೋ, ದೇವರು ತನ್ನ ಶಕ್ತಿಯಿಂದ ಉನ್ನತಕಾರ್ಯಗಳನ್ನು ನಡಿಸುವನು, ಆತನಂಥ ಉಪದೇಶಕನು ಯಾರು?"** (ಯೋಬ 36:22).

ಬಹಳಷ್ಟು ಸತ್ಯವೇದ ವಿದ್ಯಾರ್ಥಿಗಳಿಗೆ ಆದಿಕಾಂಡದ 1ನೇ ಅಧ್ಯಾಯದಿಂದ 3ನೇ ಅಧ್ಯಾಯದವರೆಗಿನ ಕಥೆ ಚಿರಪರಿಚಿತ. ಆ ಕಥೆಯಲ್ಲಿ ಬರುವ ಪಾತ್ರಗಳಾದ – ದೇವರು, ಆದಾಮ, ಹವ್ವಳು ಮತ್ತು ಸರ್ಪದ ಪರಿಚಯವೂ ಆವರಿಗಾಗಿದೆ. ಕಥೆಯ ರಂಗಭೂಮಿಯ ಮೇಲಿನ ದೃಶ್ಯ ಜೋಡಣೆ "ಏದೆನ್" ಎಂದು ಕರೆಯಲ್ಪಡುವ ಭವ್ಯ ತೋಟ. ಕಥಾವಸ್ತುವಿನ ಸಾಲುಗಳು, ಒಂದು ತಾರ್ಕಿಕ ಘಟನಾವಳಿಗಳ ಸರಮಾಲೆ. ಆದಾಮ ಮತ್ತು ಹವ್ವಳಿಗೆ ದೇವರು ಸೂಚನೆಗಳನ್ನು ಕೊಡುತ್ತಾನೆ. ಆದಾಮ ಮತ್ತು ಹವ್ವಳು ಪಾಪಮಾಡುತ್ತಾರೆ. ಅವರನ್ನು ಏದೆನ್‌ನಿಂದ ಹೊರದಬ್ಬಲಾಗುತ್ತದೆ. ಇಷ್ಟೆಲ್ಲ ಆದರೂ, ಆದಿಕಾಂಡದ ಮೊದಲ ಕೆಲವು ಅಧ್ಯಾಯಗಳನ್ನು ಬಹಳ ಸಮೀಪದಿಂದ ವೀಕ್ಷಿಸಿದಾಗ, ಅದರಲ್ಲೂ ಶಿಕ್ಷಣವೆಂಬ ಚಸ್ಮ ಧರಿಸಿ ನೋಡಿದಾಗ:, ಪಾತ್ರಗಳು, ದೃಶ್ಯಜೋಡಣೆಗಳು ಮತ್ತು ಕಥೆಯ ಒಳನೋಟಗಳು ಕಣ್ಮುಂದೆ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

---

**ಈ ವಾರದ ಪಾಠ ಅಕ್ಟೋಬರ್ 3ನೇ ದಿನಾಂಕ ಬರುವ ಸಬ್ಬತ್ ದಿನದ ಚರ್ಚೆಗೆ ನಮ್ಮನ್ನು ಸಿದ್ಧಗೊಳಿಸುವುದು.**

ಈ ಭೂಮಿ ಸೃಷ್ಟಿಯಾದ ಆರಂಭದಲ್ಲಿಯೇ ಪ್ರಾರಂಭವಾದ ಶಿಕ್ಷಣ ವ್ಯವಸ್ಥೆ, ಅಂದಿನಿಂದ– ಇಂದಿನ ತನಕ ಮತ್ತು ಮುಂದೆಯೂ ಮಾನವರಿಗೆ ಮಾದರಿಯ ಶಿಕ್ಷಣದ ವ್ಯವಸ್ಥೆಯಾಗಿದೆ. ಆ ವ್ಯವಸ್ಥೆಯ ತತ್ವಗಳ ಒಂದು ಮಾದರಿಯೇ, ನಮ್ಮ ಆದಿ ತಂದೆ–ತಾಯಿ ಇದ್ದ ಏದೆನ್‌ನಲ್ಲಿ ಸಂಸ್ಥಾಪನೆಗೊಂಡ ಒಂದು ಆದರ್ಶ ಶಾಲೆ. ಆ ಶಾಲೆಯ ರಚನೆ ಇಂತಿದೆ; ಪ್ರಕೃತಿಯೇ ಪಠ್ಯಪುಸ್ತಕ, ಸೃಷ್ಟಿಕರ್ತನಾದ ದೇವರೇ ಪಾಠ ಕಲಿಸುವ ಗುರು, ಮಾನವ ಕುಟುಂಬಗಳ ಮಾತಾಪಿತೃಗಳೇ ವಿದ್ಯಾರ್ಥಿಗಳು" – ಎಲೆನ್ ಜಿ ವೈಟ್, ಎಜುಕೇಷನ್, ಪುಟ 20.

ಈ ಮೊಟ್ಟಮೊದಲ ಶಾಲೆಯ ಸಂಸ್ಥಾಪಕನೂ, ಪ್ರಾಂಶುಪಾಲನೂ ಮತ್ತು ಉಪಾಧ್ಯಾಯನೂ ಕರ್ತನಾದ ದೇವರೇ ಆಗಿದ್ದನು. ವಿಷಾಧವಾದ ಸಂಗತಿಯೇನೆಂದರೆ, ಆದಾಮ ಮತ್ತು ಹವ್ವಳು ಮತ್ತೊಬ್ಬ ಉಪಧ್ಯಾಯನನ್ನು ಆರಿಸಿಕೊಂಡದ್ದು ಮತ್ತು ಅವನಿಂದ ತಪ್ಪಾದ ಪಾಠ ಕಲಿತದ್ದು. ಇದರಿಂದ ಏನಾಯಿತು? ಏಕಾಯಿತು? ಮತ್ತು ಆದಿಕಾಲದ ಆ ಶಿಕ್ಷಣದಿಂದ ನಾವು ಕಲಿಯಬೇಕಾದ್ದು ಏನು? ಮತ್ತು ಇಂದು, ಅಂದಿನ ಶಿಕ್ಷಣ ನಮಗೆ ಹೇಗೆ ಸಹಾಯ ಮಾಡಬಲ್ಲದು? ಈ ವಾರದ ಪಾಠ, ಮೇಲಿನ ಪ್ರಶ್ನೆಗಳಿಗೆ ಉತ್ತರ ನೀಡುತ್ತವೆ.

**ಭಾನುವಾರ** **ಸೆಪ್ಟೆಂಬರ್ 27**

## ಪ್ರಥಮ ಶಾಲೆ

ಒಂದು ತೋಟವನ್ನು ತರಗತಿಯ ಕೊಠಡಿ ಎಂದು ಯೋಚಿಸಲಾಗದು ನಿಜ, ಆದರೆ ದೇವರ ಸೃಷ್ಟಿಯ, ಹಾಳುಮಾಡಲು ಸಾಧ್ಯವಾಗದ ಸಂಪತ್ತಿನಿಂದ ತುಂಬಿದ್ದ ಏದೆನ್, ಪರಿಪೂರ್ಣ ಜ್ಞಾನೋದಯವನ್ನುಂಟು ಮಾಡುತ್ತಿತ್ತು. ಅಂದು ಅಧಃಪತನಕ್ಕೊಳಗಾಗದ ಜೀವಿಗಳು, ಅಧಃಪತನಕ್ಕೊಳಗಾಗದಿದ್ದ ಪ್ರಪಂಚದ 'ತೋಟದ ತರಗತಿಯಲ್ಲಿ', ಸೃಷ್ಟಿಕರ್ತನಿಂದ ಮುಖಾಮುಖಿಯಾಗಿ ಪಾಠ ಕಲಿಯುತ್ತಿದ್ದರು ಎಂಬುದನ್ನು ಇಂದಿನ ಸನ್ನಿವೇಶದಲ್ಲಿ ಬಹುಶಃ ನಮ್ಮಿಂದ ಕಲ್ಪನೆ ಮಾಡಿ ನೋಡುವುದೂ ಸಹ ಕಷವೆನಿಸಬಹುದು.

**ಆದಿಕಾಂಡ 2:7–23ನ್ನು ಓದಿಕೊಳ್ಳಿರಿ. ಆದಾಮನನ್ನು ಸೃಷ್ಟಿಸಿ, ಆ ತೋಟದಲ್ಲಿ ಇರಿಸಿ, ಅವನು ಮಾಡಬೇಕಾದ ಕೆಲಸವೇನು ಎಂಬುದನ್ನು ತಿಳಿಸುವ ಹಿನ್ನೆಲೆಯಲ್ಲಿ ಇರುವ ದೇವರ ಉದ್ದೇಶವೇನು?**

---

---

ದೇವರು, ಪುರುಷ ಮತ್ತು ಸ್ತ್ರೀಯನ್ನು ತನ್ನ ಸ್ವರೂಪದಲ್ಲಿಯೇ ಸೃಷ್ಟಿಸಿದನು. ಅವರಿಗೊಂದು ಮನೆಯನ್ನು ಕೊಟ್ಟನು. ಅರ್ಥಪೂರ್ಣ ಕೆಲಸವನ್ನು ವಹಿಸಿದನು. ಗುರು–ಶಿಷ್ಯರ ಸಂಬಂಧವನ್ನು ಪರಿಗಣಿಸಿದರೆ, ಅವರ ಸಂಬಂಧ ಆದರ್ಶಮಯವಾದದ್ದು. ದೇವರು, ಆದಾಮನನ್ನು ತಾನೇ ಸೃಷ್ಟಿಸಿದ್ದರಿಂದ, ಆತನಿಗೆ ಅವನ ಸಾಮರ್ಥ್ಯಗಳು ಏನೆಂದು ತಿಳಿದಿದ್ದವು. ಆದಾಮ ತಾನು ಹೇಳುವುದನ್ನೆಲ್ಲ ಗ್ರಹಿಸಬಲ್ಲನೆಂದು, ದೇವರು ಅವನಿಗೆ ಬೋಧಿಸಲಾರಂಭಿಸಿದ್ದನು.

ದೇವರು, ಮಾನವನಿಗೆ ಜವಾಬ್ದಾರಿ ಕೊಟ್ಟದ್ದು ಸರಿ. ಆದರೆ ಅದೇ ಸಮಯದಲ್ಲಿ ಅವರು ಸಂತೋಷವಾಗಿರಬೇಕೆಂದುಕೊಂಡದ್ದು ನಿಜ. ದೇವರು, ಮಾನವರಿಗೆ ಸಂತೋಷ ಕೊಡುವುದು ಎಂದರೆ, ಅದರಲ್ಲಿ ಜವಾಬ್ದಾರಿಯನ್ನು ಒಂದು ಭಾಗವಾಗಿಸಿಯೇ ಕೊಟ್ಟಿದ್ದಾನೆ. ಕೊಟ್ಟ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನೆರವೇರಿಸುವುದರಲ್ಲಿ ಯಾರು ತಾನೇ ಸಂತೃಪ್ತಿ ಮತ್ತು ಸಂತೋಷವನ್ನು ಪಡೆಯುವುದಿಲ್ಲ? ದೇವರಿಗೆ, ಆದಾಮನ ಮನಸ್ಸು ಎಂಥದ್ದು ಎಂಬುದು ಗೊತ್ತಿತ್ತು. ಅವನು ಯಾವ ಸಾಧನೆ ಮಾಡಬೇಕು ಎಂಬುದನ್ನು ತಿಳಿದುಕೊಂಡಿದ್ದನು. ಆದ್ದರಿಂದಲೇ, ಏದೆನ್ ತೋಟದ ವ್ಯವಸಾಯವನ್ನು ಅವನಿಗೆ ವಹಿಸಿಕೊಟ್ಟಿದ್ದನು: "ಯೆಹೋವದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವುದಕ್ಕೂ ಕಾಯುವದಕ್ಕೂ ಅದರಲ್ಲಿ ಇಟ್ಟನು" (ಆದಿಕಾಂಡ 2:15). ನಮಗೆ ಈಗ ಗೊತ್ತಿರುವುದು ಪಾಪಮಯ ಮತ್ತು ಮರಣದ ಪ್ರಪಂಚವಷ್ಟೇ. ಆದರೆ ಆದಾಮ ವಾಸಮಾಡಿದ್ದ ಏದೆನ್ ತೋಟ ಹೇಗಿತ್ತು, ಅಲ್ಲಿ ಅವನು ಯಾವ ಕೆಲಸ ಮಾಡುತ್ತಿದ್ದ. ಅವನು ದುಡಿಮೆಯಿಂದ ಕಲಿತ ಪಾಠವೇನು ಎಂಬುದನ್ನು ನಮ್ಮಿಂದ ಕಲ್ಪನೆ ಮಾಡಿ ನೋಡಲು ಸಹ ಸಾಧ್ಯವಾಗದು.

ಆದಿಕಾಂಡ 2:19–23ರಲ್ಲಿ, ದೇವರು ಆದಾಮನ ಜೊತೆಯಾಗಿರಲು ಪ್ರಾಣಿಗಳನ್ನು ಉಂಟುಮಾಡಿದನು. ಹವ್ವಳನ್ನು ಅವನಿಗೆ ಹೆಂಡತಿಯಾಗುವಂತೆ ಸೃಷ್ಟಿಸಿದನು. ಆಕೆ ಅವನಿಗೆ ಸಹಕಾರಿಯಾದಳು. ಈ ರೀತಿಯಲ್ಲಿ ಸ್ತ್ರೀಯ ಸೃಷ್ಟಿಯಾಯಿತು.

ಮಾನವರು ತನ್ನೊಂದಿಗೆ ಅನ್ಯೋನ್ಯರಾಗಿರಬೇಕೆಂದು ದೇವರು ಬಯಸಿದನು. ಏದೆನ್ ತೋಟದೊಳಗೇ ದೇವರು ಒಂದು ಆತ್ಮೀಯ ವಾತಾವರಣವನ್ನು ಹುಟ್ಟು ಹಾಕಿದ್ದನು. ಇವೆಲ್ಲವೂ ಸೃಷ್ಟಿಯ ಹಿಂದಿನ ದೇವರ ಉದ್ದೇಶ ಏನಾಗಿತ್ತು ಎಂಬುದನ್ನು ದೃಢೀಕರಿಸುತ್ತವೆ; ಮಾನವರ ಮೇಲೆ ಆತನಿಗಿದ್ದ ಪ್ರೀತಿಯನ್ನು ಪ್ರಮಾಣೀಕರಿಸುತ್ತವೆ. ಅಂತಹ ವಾತಾವರಣ ಮತ್ತು ಆತನ ಪ್ರೀತಿ ಹೇಗಿದ್ದಿರಬಹುದು ಎಂದು ಇಂದು ನಮ್ಮಿಂದ ನೆನೆಸಿನೋಡಲು ಸಾಧ್ಯವಾಗದು ನಿಜ. ಯಾಕೆಂದರೆ ಏದೆನ್ ಇದ್ದ ಕಾಲಕ್ಕೂ ನಾವು ಇಂದು ಭೂಮಿಯ ಮೇಲಿರುವ ಕಾಲಕ್ಕೂ ಬಹುದೂರದ ಅಂತರವಿದೆ.

**ಏದೆನ್‌ನಿಂದ ಮಾನವನನ್ನು ದೂರಮಾಡಿ ಬಹುಕಾಲವೇ ಆಗಿದ್ದರೂ ಪ್ರಕೃತಿಯಿಂದ ನಾವು ಪಾಠ ಕಲಿಯಬಹುದು. ಆ ಪಾಠಗಳಾದರೂ ಯಾವುವು? ಅವುಗಳಿಂದ ನಮಗಾಗುವ ಪ್ರಯೋಜನಗಳಾವುವು?**

**ಸೋಮವಾರ** **ಸೆಪ್ಟೆಂಬರ್ 28**

## ಅಂತಃಸ್ಸರಣ (ಕರೆಯದೆ ಬರೋಣ)

ಅನೇಕ ಉಪಾಧ್ಯಾಯ/ ಉಪಾಧ್ಯಾಯನೀಯರ ಸಂತೋಷದ ಕೆಲಸಗಳಲ್ಲಿ ತರಗತಿಯ ವ್ಯವಸ್ಥೆಯೂ ಸಹ ಒಂದಾಗಿದೆ : ಬುಲೆಟಿನ್ ಬೋರ್ಡುಗಳನ್ನು ನೇತುಹಾಕುವುದು, ವಿತರಿಸಬೇಕಾದ ಸಾಮಗ್ರಿಗಳನ್ನು ವ್ಯವಸ್ಥಿಸುವುದು, ತಮಗೆ ಇಷ್ಟವಾದ ರೀತಿಯಲ್ಲಿ ಕಲಿಸುವ ತರಗತಿಯನ್ನು ಜೋಡಣೆ ಮಾಡುವುದೇ ಇತ್ಯಾದಿ. ಏದೆನ್ ತೋಟವೆಂಬ ತರಗತಿ ಹೇಗಿರಬೇಕೆಂಬ ದೇವರ ಮನೋಬಯಕೆಯನ್ನು ನೋಡಿದಾಗ, ಆದಾಮ ಮತ್ತು ಹವ್ವಳ ಕಲಿಕೆಯ ವಾತಾವರಣದ ಪೂರ್ವಸಿದ್ಧತೆಯಲ್ಲಿ ದೇವರು ಅದೆಷ್ಟು ಕಾಳಜಿ ವಹಿಸಿದ್ದನೆಂಬುದನ್ನು ಕಾಣಬಹುದು. ಅವರ ಸುತ್ತಮುತ್ತ ಸುಂದರವಾದ ಪರಿಸರ

ಆವರಿಸುವುದನ್ನೇ ಆತ ಬಯಸಿದ್ದನು. ಪ್ರತಿಯೊಂದು ಹೂ, ಹಕ್ಕಿ, ಪ್ರಾಣಿ ಮತ್ತು ಮರ ಅವುಗಳಿದ್ದ ಪ್ರಪಂಚ ಮತ್ತು ಅವುಗಳನ್ನು ಸೃಷ್ಟಿಸಿದ ಸೃಷ್ಟಿಕರ್ತನ ಕುರಿತು, ಕಲಿಯಲು ಸದಾವಕಾಶ ಕಲ್ಪಿಸಿಕೊಟ್ಟಿತ್ತು ಎಂಬುದನ್ನು ನಾವು ಊಹಿಸಬಹುದು.

ಆದರೂ ಆದಿಕಾಂಡ 2ನೇ ಅಧ್ಯಾಯದಿಂದ ಆದಿಕಾಂಡ 3ನೇ ಅಧ್ಯಾಯಕ್ಕೆ ಕಾಲಿಡುತ್ತಿದ್ದಂತೆ, ಬದಲಾದ ದೃಶ್ಯ ಘಟನೆಯೊಂದು ನಮ್ಮ ಮುಂದೆ ಬಂದು ನಿಲ್ಲುತ್ತದೆ. ಇಷ್ಟೊತ್ತಿಗಾಗಲೇ ನಾವು, ದೈವಿಕ ಇಂಗಿತದಿಂದ, ದೇವರಿಂದಲೇ ಸೃಷ್ಟಿಸಲ್ಪಟ್ಟ ಎಲ್ಲ "**ಒಳ್ಳೆಯದು**" ಎಂಬುದರ ಪಟ್ಟಿಯನ್ನು ಮಾಡಿಕೊಂಡಿದ್ದೇವೆ. ಆದರೆ ಆದಿಕಾಂಡ 3:1ರಲ್ಲಿ ದೇವರು ಮಾನವರಿಗೆ ಕೊಡುವ ಆಯ್ಕೆಯ ಸ್ವಾತಂತ್ರ್ಯದ ಅವಕಾಶ ನಮ್ಮನ್ನು ಬಡಿದೆಬ್ಬಿಸುತ್ತದೆ. ಸರ್ಪದ ಇರುವಿಕೆಯನ್ನು ಪರಿಚಯಿಸುವ: "**ಯೆಹೋವದೇವರು ಉಂಟುಮಾಡಿದ ಎಲ್ಲಾ ಭೂಜಂತುಗಳಲ್ಲಿ ಸರ್ಪವು ಯುಕ್ತಿಯುಳ್ಳದ್ದಾಗಿತ್ತು**" ಎಂಬ ಮಾತು ಈ ಹಿಂದೆ ಬಳಸಲ್ಪಟ್ಟ ಭಾಷಾಶೈಲಿಗಿಂತ ಬಹಳ ಭಿನ್ನವಾಗಿದೆ. ಹಿಂದಿನ ಅಧ್ಯಾಯಗಳಲ್ಲಿ ದೇವರ ಸೃಷ್ಟಿಯನ್ನು ವರ್ಣಿಸಲು "**ಒಳ್ಳೇದು**", "**ನಾಚಿಕೊಳ್ಳಲಿಲ್ಲ**" ಮತ್ತು "**ಆನಂದ**" ಎಂಬ ವಿಶೇಷಣಗಳು ಬಳಸಲ್ಪಟ್ಟಿದ್ದವು. ಈಗ, ಸರ್ಪದ ಆಗಮನದೊಂದಿಗೆ ಮಾತಿನ ಶೈಲಿಯಲ್ಲಿ ಬದಲಾವಣೆ ಎದ್ದು ಕಾಣುತ್ತದೆ. ಕೆಲವೊಂದು ತರ್ಜುಮೆಗಳಲ್ಲಿ "**ಯುಕ್ತಿ**" ಎಂಬ ಪದವನ್ನು "**ಕಪಟತನ/ ಕುಟಿಲತನ**" ಎಂದು ಭಾಷಾಂತರಿಸಲಾಗಿದೆ. ಇಲ್ಲಿಯ ತನಕ ಪರಿಪೂರ್ಣವಾಗಿದ್ದ ಸೃಷ್ಟಿಗೆ ಒಂದು ಋಣಾತ್ಮಕ ಅಂಶದ ಪ್ರವೇಶವಾಯಿತು.

ಇದಕ್ಕೆ ವ್ಯತ್ಯಾಸವಾಗಿ ಆದಿಕಾಂಡ, ದೇವರನ್ನು "ಕಪಟತನ/ ಕುಟಿಲತನ"ಕ್ಕೆ ವಿರುದ್ಧಾರ್ಥದಲ್ಲಿ, ಧನಾತ್ಮಕವಾಗಿ ಅಭಿವ್ಯಕ್ತಪಡಿಸುತ್ತದೆ. ತೋಟದಲ್ಲಿರುವ ದಂಪತಿಗಳಿಂದ, ದೇವರು, ಏನನ್ನು ನಿರೀಕ್ಷಿಸುತ್ತಿದ್ದಾನೋ ಅದರಲ್ಲಿ ಯಾವ ಸಂದೇಹವೂ ಇಲ್ಲ. ಅದು ಸ್ಫಟಿಕದಷ್ಟು ಸುಸ್ಪಷ್ಟ. ಆದಿಕಾಂಡ 2:16,17ರಲ್ಲಿ, "**ಒಳ್ಳೇದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನು ಮಾತ್ರ ತಿನ್ನಬಾರದು**" ಎಂಬ ಆಜ್ಞೆಯನ್ನು ದೇವರು ಆದಾಮ–ಹವ್ವಳಿಗೆ ಹೊರಡಿಸುವ ಮೂಲಕ, ಮಾನವ ದೇವರಿಗೆ ವಿಧೇಯರಾಗಿ ನಡೆದುಕೊಳ್ಳಬೇಕಾದ ನಿಯಮದ ಸಂಸ್ಥಾಪನೆಯಾಯಿತು.

ಈ ಕಥೆಯಿಂದ ನಾವು ಏನೆಲ್ಲಾ ಕಲಿಯಬಹುದಾದರೂ, ಒಂದು ಸಂಗತಿ ಮಾತ್ರ ಎದ್ದು ಕಾಣುವುದಂತೂ ನಿಜ. ಆದಾಮ ಮತ್ತು ಹವ್ವಳು ಸರ್ವಸ್ವತಂತ್ರ ಮರ್ತ್ಯ ಜೀವಿಗಳಾಗಿ ಸೃಷ್ಟಿಸಲ್ಪಟ್ಟು, ವಿಧೇಯತನ ಅಥವಾ ಅವಿಧೇಯತನಗಳೆರಡರಲ್ಲಿ ಒಂದನ್ನು ಅವರು ಆರಿಸಿಕೊಳ್ಳಬಹುದಾಗಿತ್ತು. ಹೀಗಾಗಿ, ಆದಿಯಿಂದಲೇ, ಅಧಃಪತನಗೊಳ್ಳದ ಪ್ರಪಂಚದಲ್ಲಿಯೂ ಮಾನವನಿಗೆ ಆಯ್ಕೆಯ ಸ್ವಾತಂತ್ರ್ಯ ನೀಡಿದ್ದರ ವಾಸ್ತವತೆಯನ್ನು ಇಲ್ಲಿ ಕಾಣಬಹುದು.

**ಆದಿಕಾಂಡ 3:1–6ರಲ್ಲಿ ಸರ್ಪ ಕೊಟ್ಟ ವಿವರಣೆಯನ್ನೂ ಮತ್ತು ಹವ್ವಳು ಅದನ್ನು ಪುನರಾವರ್ತಿಸುವ ರೀತಿಯನ್ನು ಪರೀಕ್ಷಿಸಿರಿ. ಹವ್ವಳಿಗೆ, ಸರ್ಪವು ನೀಡುವ ಮಾಹಿತಿಯಲ್ಲಿ ನೀವು ಗಮನಿಸುವುದೇನು? ಆ ನಂತರ ಹವ್ವಳು ಒಳ್ಳೇದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ವಿಷಯದಲ್ಲಿ ಹೇಗೆ ನಡೆದುಕೊಂಡಳು ಎಂಬ ವಿಷಯದಲ್ಲಿಯೂ ನೀವು ಗಮನಿಸುವುದೇನು?**

ಆದಿಕಾಂಡ 2:17ರಲ್ಲಿ ದೇವರು, ಆದಾಮನಿಗೆ– ಒಳ್ಳೇದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು. ಆದಿಕಾಂಡ 3:3ರಲ್ಲಿ ಹವ್ವಳು ಮತ್ತೆ ಈ ಆಜ್ಞೆಯನ್ನು ಉಲ್ಲೇಖಿಸುವಾಗ, ಅದನ್ನು ಅಷ್ಟೇ ಬಲವಾಗಿ ಅಭಿವ್ಯಕ್ತ ಮಾಡುವುದಿಲ್ಲ, "ಸತ್ತೇ ಹೋಗುವಿ" ಎಂಬ ಮಾತನ್ನು ಕೈಬಿಟ್ಟಿದ್ದಾಳೆ. ಆದಿಕಾಂಡ 3:4ರಲ್ಲಿ ದೇವರ ಆಜ್ಞೆಯನ್ನು ವ್ಯತಿರಿಕ್ತವಾಗಿ ಮಾತನಾಡುವ ಸರ್ಪವು, ಸಂಪೂರ್ಣವಾಗಿ ವಿರೋಧ ಅರ್ಥಕೊಡುವಂತೆ ಮಾತನಾಡುತ್ತದೆ. ಹವ್ವಳು, ಏದೆನ್ ತೋಟದಲ್ಲಿ ದೇವರಿಂದ ಶಿಕ್ಷಣ ಪಡೆದಿದ್ದರೂ, ಒಬ್ಬ ವಿಧೇಯ ವಿದ್ಯಾರ್ಥಿನಿಯಾಗಿ, ಗುರುವಿನ ಬೋಧನೆಯನ್ನು ಗಂಭೀರವಾಗಿ ಪರಿಗಣಿಸದಿರುವುದನ್ನು ಆಕೆಯ ಮಾತುಗಳಲ್ಲಿ ನಾವು ಗಮನಿಸಬಹುದು.

**ಮಂಗಳವಾರ** **ಸೆಪ್ಟೆಂಬರ್ 29**

## ಗುರಿ ತಪ್ಪಿದ ಸಂದೇಶ

ನಾವು ನಿನ್ನೆಯ ದಿನ ನೋಡಿದ ಹಾಗೆ, ಹವ್ವಳು ತನ್ನ ಸಂಭಾಷಣೆಯಲ್ಲಿ ದೇವರು ಬೋಧಿಸಿದ ಆಜ್ಞೆಯನ್ನು, ಪುನಃ ಹೇಳುವಾಗ, ಪದಗಳ ಕಲಬೆರಕೆ ಮಾಡಿ, ದೇವರ ಆಜ್ಞೆಯನ್ನು ಅಶುದ್ಧಗೊಳಿಸಿದ್ದಳು.

ದೇವರು ತನಗೆ ಹೇಳಿದ್ದನ್ನು ಆಕೆ ಅಪಾರ್ಥ ಮಾಡಿಕೊಳ್ಳದಿದ್ದರೂ, ಆತ ಬೋಧನೆಯನ್ನು ತುಂಬಾ ಗಂಭೀರವಾಗಿ ಗಮನಿಸಲಿಲ್ಲ. ಆಕೆಯ ನಡತೆಯ ಪರಿಣಾಮಗಳನ್ನು ಒಬ್ಬನು ಉತ್ಪ್ರೇಕ್ಷಿಸುವುದಿಲ್ಲ.

ಹೀಗಾಗಿ ಹವ್ವಳು ಸರ್ಪವನ್ನು ಸಂಧಿಸಿದಾಗ, ತೋಟದಲ್ಲಿರುವ ಮರಗಳನ್ನು ಕುರಿತು ದೇವರು ಏನು ಹೇಳಿದ್ದನೋ ಅದನ್ನು ಪುನರುಚ್ಚಾರ ಮಾಡುತ್ತಾಳೆ (ಆದರೆ ಇದ್ದದ್ದನ್ನು ಇದ್ದ ಹಾಗೆ ಹೇಳುವುದಿಲ್ಲ) (ಆದಿಕಾಂಡ 3:2,3). ಈ ಸಂಗತಿಯೇನೂ ಸರ್ಪಕ್ಕೆ ಹೊಸ ಸುದ್ದಿಯಾಗಿರಲಿಲ್ಲ. ದೇವರು ಆಕೆಗೆ ಕೊಟ್ಟ ಆಜ್ಞೆ ಅವನಿಗೆ ಚಿರಪರಿಚಿತವಾದದ್ದಾಗಿತ್ತು. ಆದ್ದರಿಂದ, ಈ ಆಜ್ಞೆಯನ್ನು ತಿರುಗು–ಮುರುಗು ಮಾಡಲು ಅವನು ಸಿದ್ಧತೆ ಮಾಡಿಕೊಂಡೇ ಬಂದಿದ್ದ. ಈ ರೀತಿಯಾಗಿ ಅವನು ಹವ್ವಳ ಮುಗ್ಧತೆಯನ್ನು ಭೇಟೆಯಾಡಿದ್ದ.

**ಆದಿಕಾಂಡ 3:4–6ನ್ನು ಪರೀಕ್ಷಿಸಿರಿ. ದೇವರು ಹೇಳಿದ್ದನ್ನು ನೇರವಾಗಿ ತಿರಸ್ಕರಿಸದೆ, ಹವ್ವಳನ್ನು ತನ್ನ ಕಡೆಗೆ ಸೆಳೆಯುವ ಸಲುವಾಗಿ, ಸರ್ಪ ಹೇಳಿದ್ದೇನು? ಯಾವ ತತ್ವಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡನು?**

________________________________________

________________________________________

ಯಾವಾಗ ದೇವರ ಆಜ್ಞೆ ಭಾಗಶಃ ಸರಿ ಎಂದು ಸರ್ಪ ಹೇಳಿತೋ, ಆ ಕ್ಷಣದಲ್ಲಿ ಹವ್ವಳು ಅದನ್ನು ಖಚಿತಪಡಿಸಿಕೊಳ್ಳಲು ದೇವರ ಬಳಿ ಸಾರಬೇಕಿತ್ತು. ಭೂಮಿಯಲ್ಲಿ ಇಂದು ಕಾಣಸಿಗದ, ಆದರೆ ಏದೆನ್ ತೋಟದಲ್ಲಿ ತಮ್ಮ ಅಮೋಘ ಗುರುವನ್ನು ವಿದ್ಯಾರ್ಥಿ ಯಾವಾಗ ಬೇಕಾದರೂ ಸಂಧಿಸಲು ಇದ್ದ ಸದಾವಕಾಶ ಇತ್ತಲ್ಲಾ, ಅದೇ ಏದೆನ್ ಶಿಕ್ಷಣದ ಬಹು ಸುಂದರವಾದ ಭಾಗ. ಆದರೆ ಆ ಕ್ಷಣದಲ್ಲಿ, ದೇವರ ಬಳಿಗೆ ಓಡಿಹೋಗುವ ಮತ್ತು ಆತನ ಸಹಾಯದ ಯಾಚನೆ ಮಾಡುವ ಬದಲು, ಹವ್ವಳು, ಸರ್ಪದ ಸಂದೇಶವನ್ನು ತಕ್ಷಣ ಅಂಗೀಕಾರ ಮಾಡಿಕೊಳ್ಳುತ್ತಾಳೆ. ದೇವರ ಆಜ್ಞೆಯ ಸಂದೇಶಕ್ಕೆ ತಿದ್ದುಪಡಿ ತಂದ ಸರ್ಪದ ಸಂದೇಶವನ್ನು ಆ ಕ್ಷಣದಲ್ಲಿ ಅಂಗೀಕಾರ ಮಾಡಿಕೊಳ್ಳುವ ಹವ್ವಳು, ದೇವರ ವಿಷಯದಲ್ಲೂ ಮತ್ತು ಆತನು ಕೊಟ್ಟ ಸಂದೇಶದ ವಿಷಯದಲ್ಲೂ ನಡೆದುಕೊಂಡ

ರೀತಿ ಸಂದೇಶಾಸ್ಪದವಾಗಿದೆ.

ಇದೇ ಸಂದರ್ಭದಲ್ಲಿ ಆದಾಮ ಸಹ ಒಂದು ಕ್ಲಿಷ್ಟವಾದ ಸನ್ನಿವೇಶದಲ್ಲಿ ಅಲೆದಾಡುತ್ತಿರುತ್ತಾನೆ. "ತನ್ನ ಬಾಳಸಂಗಾತಿ ದೇವರ ಆಜ್ಞೆಯನ್ನು ಉಲ್ಲಂಘಿಸಿ ಪಾಪ ಮಾಡಿದ್ದಾಳೆ ಎಂಬ ಅಂಶವನ್ನು ಅರ್ಥಮಾಡಿಕೊಂಡಿರುತ್ತಾನೆ. ದೇವರ ಮೇಲಿನ ನಂಬಿಕೆ ಮತ್ತು ಪ್ರೀತಿಯನ್ನು ಪರೀಕ್ಷಿಸಲು ಒಡ್ಡಲಾಗಿದ್ದ ಒಂದೇ ಒಂದು ನಿಷೇಧವನ್ನು ಆಕೆ ಅಗೌರವದಿಂದ ಕಂಡಿದ್ದಳು. ಆಕೆಯ ಈ ನಡೆ ಆದಾಮನ ಮನಸ್ಸಿನಲ್ಲಿ ಭಯಂಕರ ಹೋರಾಟಕ್ಕೆ ನಾಂದಿಹಾಡಿತ್ತು. ತನ್ನನ್ನು ಒಂಟಿಯಾಗಿ ಬಿಟ್ಟು, ಒಬ್ಬಂಟಿಗಳಾಗಿ ತೋಟದಲ್ಲಿ ಆಕೆಯನ್ನು ವಿಹರಿಸಲು ಅವಕಾಶಮಾಡಿಕೊಟ್ಟಿದ್ದಕ್ಕಾಗಿ ಈಗ ಅವನು ದುಃಖಿಸಲಾರಂಭಿಸಿದ್ದ. ಆದರೆ ಈಗ ಕಾಲ ಮಿಂಚಿಹೋಗಿತ್ತು. ಆಕೆಯ ಸಹವಾಸದ ಸಂತೋಷವನ್ನು ಅನುಭವಿಸಿದ್ದ ಆದಾಮನಿಗೆ ಈ ಅವಳಿಂದ ಅಗಲುವ ಸಮಯ ಒದಗಿ ಬಂದಿತ್ತು. ಈಗ ಅವನು ಈ ಸಂದರ್ಭವನ್ನು ಹೇಗೆ ಜೀರ್ಣಿಸಿಕೊಳ್ಳಬೇಕಾಗಿತ್ತು? – ವೈಟಮ್ಮನವರ, ಪ್ಯಾಟ್ರಿಯಾರ್ಕ್ಸ್ ಅಂಡ್ ಪ್ರಾಫೆಟ್ಸ್, ಪುಸ್ತಕ, ಪುಟ 56.

ದುರಾದೃಷ್ಟವಶಾತ್ ತಪ್ಪು ನಡೆದುಹೋಗಿದೆ ಎಂಬುದನ್ನು ಸರಿಯಾಗಿಯೇ ಲೆಖ್ಖ ಹಾಕಿದ್ದ ಆದಾಮ, ತಾನೂ ತಪ್ಪನ್ನೇ ಆಯ್ಕೆ ಮಾಡಿಕೊಂಡಿದ್ದ.

**ಇಲ್ಲಿನ ವ್ಯಂಗ್ಯಪೂರಿತ ಮೋಸವನ್ನು ಕುರಿತು ಆಲೋಚಿಸಿರಿ : ಸರ್ಪ ಹೇಳುತ್ತದೆ– "ನೀವು ಇದರ ಹಣ್ಣನ್ನು ತಿಂದಾಗಲೇ....... ನೀವು ದೇವರಂತೆ ಆಗಿ....." ಆದರೆ ಆದಿಕಾಂಡ 1:27ರ ಪ್ರಕಾರ ಅವರು ಈಗಾಗಲೇ ದೇವರ ಸ್ವರೂಪದಲ್ಲಿ ಇರುವರಲ್ಲವೇ? ಆದಾಮ ಮತ್ತು ಹವ್ವಳಿಗೆ ದೊರೆತ ಹಾಗೆ, ನಮಗೂ ಶ್ರೇಷ್ಠ ಶಿಕ್ಷಣ ದೊರೆತರೂ, ನಾವು ಸುಲಭವಾಗಿ ಮೋಸ ಹೋಗುವುದು ಹೇಗೆ? ಮತ್ತು ನಂಬಿಕೆ ಹಾಗೂ ವಿಧೇಯತೆ ಮಾತ್ರವೇ ನಮ್ಮ ರಕ್ಷಣೆ ಎಂಬ ವಿಷಯದಲ್ಲಿ ಇಂದಿನ ಪಾಠ ನಮಗೆ ಮಾಡುವ ಬೋಧನೆಯೇನು?**

**ಬುಧವಾರ ಸೆಪ್ಟೆಂಬರ್ 30**

## ಕಳೆದುಕೊಂಡದ್ದನ್ನು ಮತ್ತೆ ಸ್ವಾಧೀನ ಪಡಿಸಿಕೊಳ್ಳುವುದು

ಆದಾಮ ಮತ್ತು ಹವ್ವಳು, ಸರ್ಪದ ಮಾತಿನಂತೆ ನಡೆದುಕೊಳ್ಳುವುದನ್ನೇ

ಆಯ್ಕೆ ಮಾಡಿಕೊಂಡ ನಂತರ, ಅನೇಕ ಪರಿಣಾಮಗಳನ್ನು ಎದುರಿಸಬೇಕಾಗಿ ಬಂತು, ಅವುಗಳಲ್ಲಿ ದೇವರ ತರಗತಿಯಿಂದ ಉಚ್ಚಾಟನೆ ಸಹ ಒಂದಾಗಿತ್ತು. ತಮ್ಮ ಪಾಪದಿಂದ ಆದಾಮ ಮತ್ತು ಹವ್ವಳು ಏನನ್ನು ಕಳೆದುಕೊಂಡರು ಎಂಬುದನ್ನು ಕುರಿತು ಚಿಂತನೆ ಮಾಡಿರಿ. ಯಾವಾಗ ಅವರ ಅಧಃಪತನವನ್ನು ನಾವು ಅರ್ಥಮಾಡಿಕೊಳ್ಳುತ್ತೇವೋ, ಆಗ, ವರ್ತಮಾನಕಾಲದಲ್ಲಿ ನಮಗೆ ಇಂದಿನ ಶಿಕ್ಷಣದ ಉದ್ದೇಶವೇನಾಗಿರಬಹುದು ಎಂಬುದು ಸಹ ಅರ್ಥವಾಗುತ್ತಿರಬಹುದು. ಅವರ ಉಚ್ಚಾಟನೆಯ ನಂತರವೂ, ಈ ಅಪೂರ್ಣ ಭೂಮಿಯ ಮೇಲಿನ ಜೀವನ ಶಿಕ್ಷಣ ಒಂದು ಹೊಸ ಉದ್ದೇಶವನ್ನು ಕೊಡುತ್ತಲೇ ಬಂದಿವೆ. ಭೂಮಿ ಅಧಃಪತನಗೊಂಡ ಕಾಲದ ಹಿಂದಿನ ಶಿಕ್ಷಣ, ಆದಾಮ ಮತ್ತು ಹವ್ವಳು ದೇವರ ಚಾರಿತ್ರ್ಯ, ಆತನ ಒಳ್ಳೇತನ ಮತ್ತು ಆತನ ಪ್ರೀತಿಯೊಂದಿಗೆ ಒಡನಾಡುವಂತೆ, ದೇವರ ಯೋಜನೆಯ ರೀತಿಯಲ್ಲೇ ಎಲ್ಲವೂ ನಡೆಯುತ್ತಿತ್ತು, ಆದರೆ ಉಚ್ಚಾಟನೆಯ ನಂತರ, ಶಿಕ್ಷಣದ ಕೆಲಸ ಮಾನವೀಯತೆಯನ್ನು ದೈವೀಕತೆಯೊಂದಿಗೆ ಪುನರ್ಜೋಡನೆ ಮಾಡುವದಾಗಿರಬೇಕು, ಅಷ್ಟೇ ಅಲ್ಲದೆ ದೇವರ ಸ್ವರೂಪವನ್ನು ನಮ್ಮಲ್ಲಿ ಪುನಃಸ್ಥಾಪನೆ ಮಾಡುವಂತಿರಬೇಕು. ದೇವರ ಸಾನಿಧ್ಯದಿಂದ ಮಾನವನನ್ನು ದೈಹಿಕವಾಗಿ ದೂರವಿಟ್ಟಿದ್ದರೂ, ದೇವರ ಮಕ್ಕಳು ಇಂದಿಗೂ ಆತನು ಎಂಥವನು ಎಂಬುದನ್ನೂ, ಆತನು ಎಷ್ಟು ಒಳ್ಳೆಯವನು ಎಂಬುದನ್ನೂ ಮತ್ತು ಆತನ ಪ್ರೀತಿ ಎಂಥದ್ದೆಂಬುದನ್ನೂ ಅರಿಯಬಹುದಾಗಿದೆ. ಏದೆನ್ ತೋಟದಲ್ಲಿ ಆದಾಮ ಮತ್ತು ಹವ್ವಳು ಮಾಡಿದಂತೆ, ಪ್ರಾರ್ಥನೆ, ಸೇವೆ ಮತ್ತು ಆತನ ವಾಕ್ಯ ವಾಚನಗಳ ಮೂಲಕ ನಾವು ದೇವರ ಬಳಿಸಾರಬಹುದು.

ಒಳ್ಳೇ ಸುದ್ದಿ ಇದೆ. ಅದೇನೆಂದರೆ : ಯೇಸುಕ್ರಿಸ್ತ ಮತ್ತು ಆತನ ವಿಮೋಚನೆಯ ಯೋಜನೆಯ ನಿಮಿತ್ತ ನಾವು ಎಲ್ಲಾ ಆಶೀರ್ವಾದಗಳನ್ನು ಕಳೆದುಕೊಂಡಿಲ್ಲ. ನಮಗೆ ರಕ್ಷಣೆಯ ಮತ್ತು ದೇವರ ಹಿಂದಿನ ಸ್ವರೂಪವನ್ನು ಮತ್ತೆ ಪಡೆದುಕೊಳ್ಳುವ ನಿರೀಕ್ಷೆಯಿದೆ. ಕ್ರೈಸ್ತೀಯ ಶಿಕ್ಷಣ ತನ್ನ ವಿದ್ಯಾರ್ಥಿಗಳನ್ನು ಯೇಸು ಕ್ರಿಸ್ತನೆಡೆಗೆ ಕೈಹಿಡಿದು ನಡೆಸುತ್ತಿದೆ. ಆತನು ಅವರಿಗಾಗಿ ಏನೆಲ್ಲ ಮಾಡಿದ್ದಾನೆ ಮತ್ತು ಆತನ ಸ್ವರೂಪಕ್ಕೆ ಹೇಗೆ ಕರೆದುಕೊಂಡು ಹೋಗುವನು ಎಂಬುದನ್ನು ತಿಳಿಸಿಕೊಡುತ್ತದೆ.

**2 ಪೇತ್ರ 1:3–11ನ್ನು ಓದಿಕೊಳ್ಳಿರಿ. ಮಾನವರು, ಏದೆನ್ ತೋಟವನ್ನು ತೊರೆದಾಗ ತಮಗಿದ್ದ ಆಶೀರ್ವಾದಗಳನ್ನು ಕಳೆದುಕೊಂಡರು ಎಂಬ ಆಲೋಚನೆಯ ಬೆಳಕಿನಡಿಯಲ್ಲಿ, ಈ ವಚನಗಳನ್ನು ಓದಿದಾಗ, ಆ ಆಶೀರ್ವಾದಗಳನ್ನು ಮತ್ತೆ ಹಿಂಪಡೆಯಬಹುದು ಎಂಬ ಧೈರ್ಯವನ್ನು ಕೊಡುತ್ತಿವೆ ಈ ವಚನಗಳು. ನಮ್ಮ ಜೀವನದಲ್ಲಿ ಮತ್ತೆ ದೇವರ ಸ್ವರೂಪವನ್ನು ಪಡೆದುಕೊಳ್ಳಲು ನಾವೇನು ಮಾಡಬೇಕೆಂದು ಪೇತ್ರ ಇಲ್ಲಿ ಬರೆದಿದ್ದಾನೆ?**

______________________________

______________________________

ಯೇಸುಕ್ರಿಸ್ತನ ಮೂಲಕ ನಮಗೆ– "**ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವೂ ದೊರೆಯಿತೆಂದು ಬಲ್ಲವಷ್ಟೆ**" ಎಂಬ ವಾಗ್ದಾನ ಕೊಡಲ್ಪಟ್ಟಿದೆ. ಎಂಥಹ ವಾಗ್ದಾನ! ಎಲ್ಲವೂ ಎಂದರೆ ಅವು ಯಾವುವು? ಪೇತ್ರ, ಆ ಪಟ್ಟಿಯನ್ನು ಹೀಗೆ ಕೊಟ್ಟಿದ್ದಾನೆ: ನಂಬಿಕೆ, ಸದ್ಗುಣ, ಜ್ಞಾನ, ದಯೆ, ತಾಳ್ಮೆ ಇತ್ಯಾದಿ. ಪೇತ್ರನ ಪಟ್ಟಿಯಲ್ಲಿ ಜ್ಞಾನವೂ ಒಂದಾಗಿರುವುದನ್ನು ಗಮನಿಸಿ. ಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದ್ದು. ನಿಜವಾದ ಶಿಕ್ಷಣ ಜ್ಞಾನದೆಡೆಗೆ ಕೈಹಿಡಿದು ನಡೆಸುತ್ತದೆ. ಕ್ರಿಸ್ತನ ಕುರಿತ ಜ್ಞಾನ, ನಮ್ಮನ್ನು ಆತನಂತಾಗಿಸುವುದು ಮಾತ್ರವಲ್ಲದೆ, ಆತನ ಕುರಿತ ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳಲೂ ಸಹಾಯಮಾಡುತ್ತದೆ.

**ಆ ನಿಷೇಧಿತ ಮರ– "ಒಳ್ಳೆದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರ" ಎಂಬ ವಿಷಯವನ್ನು ಒಂದು ಕ್ಷಣ ಚಿಂತನೆ ನಡೆಸಿನೋಡಿರಿ (ಆ.ಕಾ. 2:17). ಎಲ್ಲ ಜ್ಞಾನವು ಒಳ್ಳೇದಲ್ಲ ಎಂಬ ವಿಷಯದಲ್ಲಿ ಇದು ಹೇಳುವುದೇನು? ಒಳ್ಳೆಯ ಮತ್ತು ಕೆಟ್ಟ ಜ್ಞಾನಗಳ ನಡುವಿನ ವ್ಯತ್ಯಾಸವನ್ನು ನಾವು ತಿಳಿದುಕೊಳ್ಳುವುದು ಹೇಗೆ?**

**ಗುರುವಾರ** **ಅಕ್ಟೋಬರ್ 1**

## ಅಧಿಕಾರವನ್ನು ಕಡೆಗಣಿಸುವವರು

ಕೆಲವು ವಿದ್ಯಾರ್ಥಿಗಳನ್ನು ತರಗತಿಯಲ್ಲಿ "ನೈಸರ್ಗಿಕ ವಿದ್ಯಾರ್ಥಿ"ಗಳೆಂದು ಕರೆಯಲಾಗಿದೆ. ಇಂಥಹ ವಿದ್ಯಾರ್ಥಿಗಳು ಒಳ್ಳೇ ಅಂಶಗಳನ್ನು ಗಳಿಸಲು ಕಷ್ಟಪಟ್ಟು

ಓದುವುದಿಲ್ಲ. ಇವರು ವಿಷಯವನ್ನು ಬಹಳ ವೇಗವಾಗಿ ಗ್ರಹಿಸಿಕೊಂಡುಬಿಡುತ್ತಾರೆ. ಅವರು ಗಳಿಸಿದ ಜ್ಞಾನವನ್ನು, ಅವರು ಅಷ್ಟು ಸುಲಭವಾಗಿ ಮರೆಯುವವರಲ್ಲ. ಆ ಜ್ಞಾನ ಅವರಿಗೆ ಅಂಟಿಕೊಂಡೇ ಇರುತ್ತದೆ. ಯಾರ‍್ಯಾರು ಕ್ರಿಸ್ತನಿಗೆ ತಮ್ಮನ್ನು ಪ್ರತಿಷ್ಠೆ ಮಾಡಿಕೊಂಡಿದ್ದಾರೋ ಅವರಿಗೆ ಕ್ರೈಸ್ತೀಯ ಶಿಕ್ಷಣ ಸಮ ಸದಾವಕಾಶದ ಅನುಭವ ಪ್ರಾಪ್ತಮಾಡುವುದೆಂದು ಪೇತ್ರನ ಎರಡನೇ ಪತ್ರಿಕೆಯ ಬರಹ ಸ್ಪಷ್ಟಪಡಿಸಿದೆ.

ಪೇತ್ರನ ಎರಡನೇ ಪತ್ರಿಕೆಯ ಮೊದಲನೇ ಅಧ್ಯಾಯದ ಉತ್ತೇಜನಕಾರಿ ಮಾತುಗಳು ಪೇತ್ರನ ಎರಡನೇ ಪತ್ರಿಕೆಯ ಎರಡನೇ ಅಧ್ಯಾಯದ ಶಾಂತ ಎಚ್ಚರಿಕೆಗೆ ಭಿನ್ನವಾಗಿ ಮಾತನಾಡುತ್ತವೆ.

**2 ಪೇತ್ರ 2:1–17ನ್ನು ಓದಿಕೊಳ್ಳಿರಿ. ಇಲ್ಲಿ ಪೇತ್ರನು, ಎಂಥಹ ಬಲಶಾಲಿಯಾದ ಮತ್ತು ಖಂಡನೆಯ ಮಾತುಗಳನ್ನಾಡಿದ್ದಾನೆ? ಇದೇ ಸಂದರ್ಭದಲ್ಲಿ ಚಾಣಾಕ್ಷ ಎಚ್ಚರಿಕೆ ಮತ್ತು ಖಂಡನೆಯ ಮಧ್ಯದಲ್ಲೂ ಎಂಥಹ ಮಹಾನಿರೀಕ್ಷೆಯನ್ನು ನಮಗೆ ವಾಗ್ದಾನ ಮಾಡಲಾಗಿದೆ?**

ಅಧಿಕಾರವನ್ನು ಕಡೆಗಣಿಸುವವರನ್ನು (ಪ್ರಭುತ್ವ ತಿರಸ್ಕಾರ ಮಾಡುವವರನ್ನು) ಕುರಿತು 10ನೇ ವಚನದಲ್ಲಿ ಪೇತ್ರ ಏನು ಬರೆದಿದ್ದಾನೆ ಎಂಬುದನ್ನು ಗಮನಿಸಿ. ನಮ್ಮ ದಿನದಲ್ಲಿಯೂ ಎಂಥಹ ವಾಸ್ತವತೆಯಿದೆಯೋ, ಅದಕ್ಕೆ ತಕ್ಕ ತೀಕ್ಷ್ಣವಾದ ನಿಂದನೆ ಇದಾಗಿದೆ. ಅಧಿಕಾರದ ಹಲವು ಮಜಲುಗಳ ಹಮ್ಮಿನೊಂದಿಗೆ ಸಭೆ ಕೆಲಸ ಮಾಡಬೇಕಾಗಿ ಬರುತ್ತದೆ (ಇಬ್ರಿಯ 13:7,17,24) ಮತ್ತು ಆ ಅಧಿಕಾರಕ್ಕೆ ನಮ್ಮನ್ನು ಅಧೀನಪಡಿಸಿ ವಿಧೇಯರಾಗಿಸಲು ಕರೆಕೊಡಲಾಗಿದೆ. ಆ ಅಧಿಕಾರಿಗಳೂ ಸಹ, ಸ್ವಲ್ಪಮಟ್ಟಿಗೆ, ದೇವರಿಗೆ ನಂಬಿಗಸ್ತರಾಗಿ ನಡೆದುಕೊಳ್ಳುವರಲ್ಲವೇ?

ಇಷ್ಟಾದರೂ, ಕ್ರೂರವಾದ ಖಂಡನೆಗಳ ಮಧ್ಯದಲ್ಲೂ, ಪೇತ್ರ ಒಂದು ಸಂವಾದವನ್ನು ಮುಂದಿಟ್ಟಿದ್ದಾನೆ. ಯಾರ‍್ಯಾರು ಮೋಸವನ್ನು ಆರಿಸಿಕೊಳ್ಳುತ್ತಾರೋ

ಅಂತಹವರನ್ನೂ ಶಿಕ್ಷಿಸುವುದಕ್ಕೆ ದೇವರು ಶಕ್ತನಾಗಿದ್ದಾನೆ– "**ಕರ್ತನು ಭಕ್ತರನ್ನು ಕಷ್ಟದೊಳಗಿಂದ ತಪ್ಪಿಸುವುದಕ್ಕೂ ದುರ್ಮಾರ್ಗಿಗಳನ್ನು ನ್ಯಾಯತೀರ್ಪಿನ ದಿನದ ತನಕ ಶಿಕ್ಷಾನುಭವದಲ್ಲಿ ಇಡುವುದಕ್ಕೂ ಬಲ್ಲವನಾಗಿದ್ದಾನೆ**" (2 ಪೇತ್ರ 2:9). ಕಷ್ಟ ಬರುವುದನ್ನು ತಡೆಯುವುದು ಮಾತ್ರವಲ್ಲ, ದೇವರು, ಅನೇಕ ರೀತಿಯಲ್ಲಿ ನಮ್ಮನ್ನು ಕಷ್ಟಗಳಿಂದ ತಪ್ಪಿಸಿ ಕಾಯಬಲ್ಲನು ಎಂಬುದನ್ನು, ನಮ್ಮ ಕ್ರೈಸ್ತೀಯ ಶಿಕ್ಷಣದ ಒಂದು ಭಾಗವಾಗಿ ಕಲಿಸಬಹುದಲ್ಲವೇ? ಪೇತ್ರ– "**ನಾಶಕರವಾದ ಮತಭೇದಗಳನ್ನು ಕಳ್ಳತನದಿಂದ ಹುಟ್ಟಿಸುವವರ**" ವಿಚಾರದಲ್ಲಿ ಎಚ್ಚರಿಕೆ ನೀಡಿದ್ದಾನೆ, ಯಾಕೆಂದರೆ ಅಧಿಕಾರವನ್ನು ಕಡೆಗಣಿಸುವವರನ್ನು ಖಂಡಿಸಲಾಗಿದೆ, "**ನಮ್ಮನ್ನಾಳುವವರನ್ನು**" ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು, ಅವರಿಗೆ ಗೌರವ ಮತ್ತು ವಿಧೇಯತೆಯನ್ನು ಕಲಿಸಿಕೊಡಲು ನಮ್ಮ ಕ್ರೈಸ್ತೀಯ ಶಿಕ್ಷಣ ಸಹಾಯ ಮಾಡಬಹುದಲ್ಲವೇ? (ಇಬ್ರಿಯ 13:7).

ಆದಾಮ ಮತ್ತು ಹವ್ವಳು ಅಧಿಕಾರವನ್ನು ಕಡೆಗಣಿಸಿದರೆಂದು ಒಬ್ಬನು ಹೇಳದಿದ್ದರೂ, ಕೊನೆಗೂ ಅವರು ಮಾಡಿದ್ದು ಅಧಿಕಾರಕ್ಕೆ ಅವಿಧೇಯತೆಯನ್ನು ಪ್ರದರ್ಶಿಸಿದ್ದು ತಮಗೆ ಆಜ್ಞೆಯನ್ನು ಕೊಟ್ಟು, ತಮಗೆ ಒಳ್ಳೆಯದನ್ನೇ ಬಯಸಿದ ದೇವರಿಗೆ ವಿರುದ್ಧವಾಗಿ ದಂಗೆಯೆದ್ದ ಶಕ್ತಿಯ ಜೊತೆ ಕೈಜೋಡಿಸಿ, ಆ ಶಕ್ತಿಯ ಕರೆಗೆ ಪ್ರತಿಕ್ರಿಯಿಸುವ ಮೂಲಕ, ಆದಾಮ ಮತ್ತು ಹವ್ವಳು ಪಾಪಮಾಡಿದ್ದು ಮಾತ್ರವಲ್ಲದೆ ದೇವರ ಮನಸ್ಸಿಗೆ ಹೆಚ್ಚಿನ ನೋವನ್ನುಂಟುಮಾಡಿದ್ದರು.

**ಸಭೆಯಲ್ಲಿ ಮತ್ತು ಕುಟುಂಬದಲ್ಲಿ ಮಾತ್ರವಲ್ಲ, ಜೀವನದಲ್ಲೂ ಸಹ ಅಧಿಕಾರಕ್ಕೆ ಕುರಿತ ಪ್ರಶ್ನೆಗಳನ್ನು ಚರ್ಚಿಸಿರಿ. ಅಧಿಕಾರ ಎಂದಾಗ, ಸರಿಯಾದ ರೀತಿಯಲ್ಲಿ ಅದನ್ನು ಚಲಾಯಿಸುವುದು ಮತ್ತು ಸರಿಯಾದ ರೀತಿಯಲ್ಲಿ ಅದಕ್ಕೆ ಅಧೀನವಾಗುವುದು ಮುಖ್ಯ ಏಕೆ? ನಿಮ್ಮ ಉತ್ತರವನ್ನು ಸಬ್ಬತ್ ಶಾಲೆಗೆ ತೆಗೆದುಕೊಂಡು** ಬನ್ನಿರಿ.

**ಶುಕ್ರವಾರ** **ಅಕ್ಟೋಬರ್ 2**

**ಹೆಚ್ಚಿನ ಚಿಂತನೆಗಾಗಿ :** "ತಂದೆಯೋಪಾದಿಯ ಪಾಲನೆ ಮಾಡುವ ದೇವರ ಆರೈಕೆಯಲ್ಲಿದ್ದ ಏದೆನ್ ತೋಟದ ಪವಿತ್ರ ಜೋಡಿ (ಆದಾಮ–ಹವ್ವಳು) ಮಾತ್ರ ದೇವರ ಮಕ್ಕಳಲ್ಲ, ಆದರೆ ಸರ್ವಜ್ಞಾನಿಯಾದ ದೇವರಿಂದ ಬೋಧನೆ

ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿಗಳೂ ದೇವರ ಮಕ್ಕಳಾಗಿದ್ದಾರೆ. ದೇವದೂತರುಗಳು, ಆದಾಮ ಮತ್ತು ಹವ್ವಳನ್ನು ಭೇಟಿ ಮಾಡುತ್ತಿದ್ದರು. ಸೃಷ್ಟಿಕರ್ತನಾದ ದೇವರೊಂದಿಗೆ ಸಂವಾದ ಮಾಡುತ್ತಿದ್ದರು. ಅವರ ನಡುವೆ ಯಾವ ಕತ್ತಲೆ ಕವಿದ ತೆರೆಯಿರಲಿಲ್ಲ. ಜೀವದಾಯಕ ವೃಕ್ಷ ನೀಡುವ ಕಸುವಿನಿಂದ ತುಂಬಿದ್ದವರಾಗಿದ್ದರು. ಅವರಿಗಿದ್ದ ಬೌದ್ಧಿಕ ಸಾಮರ್ಥ್ಯ, ದೇವದೂತರ ಜ್ಞಾನಕ್ಕಿಂತ ಸ್ವಲ್ಪಮಾತ್ರ ಕಡಿಮೆಯಾಗಿತ್ತು ಅಷ್ಟೇ! ಕಣ್ಣಿಗೆ ಕಾಣುವ ಈ ವಿಶ್ವದಲ್ಲಿ ಅಡಗಿರುವ ರಹಸ್ಯಗಳು– ಜ್ಞಾನಪೂರ್ಣನ ಅದ್ಭುತ ಕಾರ್ಯಗಳನ್ನೂ ತಿಳಿದುಕೊಂಡಿದ್ದೀಯಾ? ಎಂಬ ಸವಾಲು ಹಾಕುತ್ತವೆ. ಅಂತಹ ಜ್ಞಾನಪೂರ್ಣವಾದ ದೇವರಿಂದ ಆದಾಮ–ಹವ್ವಳು ಕಲಿತ ಶಿಕ್ಷಣಕ್ಕೆ ಮತ್ತು ಉತ್ಸಾಹಕ್ಕೆ ಕೊನೆಮೊದಲಿಲ್ಲ. ಪ್ರಕೃತಿಯ ನಿಯಮಗಳು ಮತ್ತು ಕಾರ್ಯಕ್ರಿಯೆಗಳನ್ನು ಆರು ಸಾವಿರ ವರ್ಷಗಳಿಂದ ಮನುಷ್ಯ ಇನ್ನೂ ಅಧ್ಯಯನ ಮಾಡುತ್ತಿದ್ದಾನೆ, ಅವುಗಳಲ್ಲಿ ಅಡಗಿರುವ ರಹಸ್ಯಮಯ ಸತ್ಯಗಳನ್ನು, ಅವುಗಳನ್ನು ರೂಪಿಸಿದವನೂ ಮತ್ತು ಎತ್ತಿಹಿಡಿಯುವವನೂ ಆದ ದೇವರು ಪ್ರಕಟಿಸುತ್ತಾ ಹೊರಟಿದ್ದಾನೆ. ಅವರು ಎಲೆ, ಹೂ ಮತ್ತು ವೃಕ್ಷಗಳೊಂದಿಗೆ ಸಂವಾದಿಸುತ್ತಿದ್ದರು. ಅವುಗಳ ಜೀವನ ರಹಸ್ಯಗಳನ್ನು ಸಂಗ್ರಹಿಸುತ್ತಿದ್ದರು. ಬದುಕುವ ಪ್ರತಿಯೊಂದು ಜೀವಿಯಿಂದ, ಅಂದರೆ ನೀರುಗಳಲ್ಲಿ ಆಡುವ ಲಿವ್ಯಾತಾನನಿಂದ ಹಿಡಿದು, ಸೂರ್ಯಕಿರಣದಲ್ಲಿರುವ ಬೆಳಕಿನ ಕಣದ ತನಕ ಪ್ರತಿಯೊಂದೂ ಆದಾಮನಿಗೆ ಚಿರಪರಿಚಿತವಾಗಿತ್ತು. ಪ್ರತಿಯೊಂದು ಬದುಕುವ ಪ್ರಾಣಿಗೆ ಅವನು ನಾಮಕರಣ ಮಾಡಿದ್ದನು. ಪ್ರಕೃತಿ ಮತ್ತು ಆ ಪ್ರಕೃತಿಯಲ್ಲಿದ್ದ ಎಲ್ಲಾ ಜೀವಿಗಳೊಂದಿಗೆ ಅವನು ಒಡನಾಡುತ್ತಿದ್ದನು. ಪರಲೋಕಗಳಲ್ಲಿರುವ ದೇವರ ಮಹಿಮೆ ತಮ್ಮ ತಮ್ಮ ಕಕ್ಷೆಯಲ್ಲಿ ಸುತ್ತುತ್ತಿರುವ ಅಸಂಖ್ಯಾತ ಲೋಕಗಳು, ಮೋಡಗಳ ನಡುವಿನ ಸಮತೋಲನಗಳು, ಬೆಳಕು ಮತ್ತು ಶಬ್ದದಲ್ಲಿ ಅಡಗಿರುವ ರಹಸ್ಯಗಳು, ಹಗಲು ಮತ್ತು ರಾತ್ರಿಯ ಚೋದ್ಯಗಳೆಲ್ಲವೂ ನಮ್ಮ ಆದಿ ತಂದೆ–ತಾಯಿಯ ಕಲಿಕೆಯ ಪಠ್ಯವಸ್ತುಗಳಾಗಿದ್ದವು. ಭೂಮಿಯ ಕಾನನದ ಪ್ರತಿ ಎಲೆಯ ಮೇಲೆ, ಪರ್ವತಗಳ ಪ್ರತಿ ಚಿಂತೆಯ ಮೇಲೆ, ಆಕಾಶದಲ್ಲಿ ಹೊಳೆಯುವ ಪ್ರತಿ ನಕ್ಷತ್ರದ ಮೇಲೆ, ದೇವರ ಹೆಸರು ಬರೆಯಲಾಗಿದೆ. ಪ್ರಕೃತಿಯಲ್ಲಿರುವ ಒಂದು ಸುವ್ಯವಸ್ಥೆ ಮತ್ತು ಹೊಂದಾಣಿಕೆಯನ್ನು ಕುರಿತು ಸರ್ವಶಕ್ತನೂ ಮತ್ತು

ಸರ್ವಜ್ಞಾನಿಯೂ ಆದ ದೇವರು ಆದಿ ತಂದೆ-ತಾಯಿಯೊಂದಿಗೆ ಮಾತಾಡಿದ್ದನು. ಅವರೋ ತಮ್ಮ ಮನಸ್ಸಿಗೆ ಆಕರ್ಷಕವಾದದ್ದೆನ್ನಲ್ಲ ಕುರಿತು ಸಂಶೋಧನೆ ಮಾಡುತ್ತಿದ್ದರು. ಕಂಡುಕೊಂಡ ಸತ್ಯ ಅವರ ಹೃದಯಗಳನ್ನು ಆಳವಾದ ಪ್ರೀತಿಯಿಂದ ತುಂಬಿಸುತ್ತಿತ್ತು. ಇಂತಹ ಸತ್ಯಶೋಧನೆ, ದೇವರಿಗೆ, ಕೃತಜ್ಞರಾಗಿರಲು ಕರೆ ನೀಡುತ್ತದೆ" - ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಮತ್ತು ಪ್ರಾಫೆಟ್ಸ್, ಪುಟ 50, 51.

## ಚರ್ಚಿಸಬೇಕಾದ ಪ್ರಶ್ನೆಗಳು

1. ದೇವರು, ಆದಿಯಲ್ಲಿ ಶಾಲೆ/ ಕೆಲಸ ಆತನನ್ನು ಮತ್ತು ಆತನ ಸೃಷ್ಟಿಯನ್ನು ಸಂಧಿಸುವ ಒಂದು ಸದಾವಕಾಶ ಎಂದಂದುಕೊಂಡಿದ್ದರೆ, ನಾವು ಸಹ ಇನ್ನೂ ಆ ದೇವನ ಇಂಗಿತವನ್ನಿಂದಿಗೂ ನಮ್ಮ ಕೆಲಸದಲ್ಲಿ ಇರಿಸಿಕೊಂಡಿದ್ದೇವೆಯೇ? ನಮ್ಮ ಕೆಲಸದ (ಸಂಬಳ, ಶೈಕ್ಷಣಿಕ, ಸ್ವಯಂ ಸೇವಕ, ದೇವರ ಸೇವೆ ಇತ್ಯಾದಿಗಳ) ಮೂಲಕ ಇನ್ನೂ ಉತ್ತಮವಾದ ಅನ್ಯೋನ್ಯತೆಯನ್ನು ಹೇಗೆ ಬೆಳೆಯಿಸಿಕೊಳ್ಳಬಹುದು?

2. ಏದೆನ್ ತೋಟದಲ್ಲಿ ಸೈತಾನನಿಂದ ಪ್ರಯೋಗಿಸಲ್ಪಟ್ಟ ಕಪಟತನ/ ಕುಟಿಲತನವನ್ನು ನೋಡಿದಾಗ, ನಮ್ಮ ಬಲಹೀನತೆಯ ವಿಷಯದಲ್ಲಿ ನಮಗೆ ಹತಾಶೆಯುಂಟಾಗುತ್ತದೆ. ಆದಾಮ ಮತ್ತು ಹವ್ವಳು ದೇವರೊಂದಿಗೆ ಅಷ್ಟೊಂದು ಅನ್ಯೋನ್ಯ ಸಾನಿಧ್ಯ ಅನುಭವಿಸಿದ್ದರೂ, ಸೈತಾನನ ಅರ್ಧ-ಸತ್ಯವನ್ನು ಬಹಳ ಸುಲಭವಾಗಿ ಅಂಗೀಕಾರ ಮಾಡಿಕೊಂಡು ಬಿಟ್ಟಿದ್ದರು. ದೇವರೊಂದಿಗೆ ಅಂತಹ ಸಮೀಪ ಅಥವಾ ಸಾನಿಧ್ಯ ಪಡೆಯದೆ, ಆತನಿಂದ ಬಹುದೂರದಲ್ಲಿರುವ ನಮಗೆ ಆಮಿಷಗಳ ವಿರುದ್ಧ ಹೋರಾಡಲು ಪರಲೋಕದಿಂದ ಶಕ್ತಿ ಲಭಿಸುವುದೇ?

3. ಅಧಿಕಾರವನ್ನು ಕುರಿತ ಪ್ರಶ್ನೆಯನ್ನು ಕುರಿತು ಚರ್ಚಿಸಿರಿ ಮತ್ತು ಅಧಿಕಾರಕ್ಕೆ ನಾವು ವಿಧೇಯರಾಗುವುದು ಮುಖ್ಯ ಏಕೆ? ಅಧಿಕಾರದಲ್ಲಿ ದೋಷ ತಲೆದೂರಿದರೆ ಏನಾಗುತ್ತದೆ? ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವುದು ಹೇಗೆ? ಹಾಗೆ ಅಧಿಕಾರದ ದುರುಪಯೋಗುತ್ತಿರುವಾಗ ಅದಕ್ಕೆ ನಾವು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕು?